ಒಂದೆರಡು ನಿಮಿಷ ನೆಲವನ್ನೇ ದೃಷ್ಟಿಸಿದರು.

"...ರಾಜಣ್ಣ ಅವರ ಕುಟುಂಬದ ಬಗ್ಗೆ ನಿನಗೆ ಹೆಚ್ಚು ತಿಳಿದಿರಲಿಕ್ಕಿಲ್ಲ ಅನಿಸುತ್ತೆ" ಎಂದು ಉದ್ಯಾನವನದ ಮಧ್ಯದಲ್ಲಿದ್ದ ಮಂಟಪದತ್ತ ಹೆಜ್ಜೆ ಹಾಕುತ್ತಾ ಹೇಳಿದರು. ಅವರನ್ನೇ ಹಿಂಬಾಲಿಸಿದೆ.

ರಾಜಣ್ಣ ಅವರ ಮಕ್ಕಳು, ಮೊಮ್ಮಕ್ಕಳು ಎಲ್ಲಾ ವ್ಯಾಪಾರ, ಉದ್ಯಮಗಳಲ್ಲಿ ತೊಡಗಿಸಿಕೊಂಡವರು. ವೈದ್ಯಕೀಯ, ಎಂಜಿನಿಯರಿಂಗ್‌ನಂತಹ ದೊಡ್ಡ ದೊಡ್ಡ ಹುದ್ದೆಗಳಲ್ಲಿದ್ದಾರೆ. ಅವರೊಂದಿಗೆ ನಮ್ಮ ಸಂಪರ್ಕ ಅಷ್ಟಕ್ಕಷ್ಟೆ.

"ನಿಮ್ಮ ತಾತನವರ ದೊಡ್ಡಪ್ಪ ಅಂದ್ರೆ ರಾಜಣ್ಣನವರ ಅಪ್ಪ ಬಳ್ಳಾರಿ ಸಮೀಪದ ಹಳ್ಳಿಯಲ್ಲಿ ದೊಡ್ಡ ಜಮೀನುದಾರರು. ತುಂಬಾ ಶ್ರೀಮಂತರು. ಅವರು ತಮ್ಮ ಮಗ ರಾಜಣ್ಣನ ಮದುವೆಯನ್ನೂ ಅಷ್ಟೇ ಶ್ರೀಮಂತ ಕುಟುಂಬವೊಂದರ ಹೆಣ್ಣುಮಗಳೊಂದಿಗೆ ವಿಜೃಂಭಣೆಯಿಂದ ಮಾಡಿದರು. ಇಡೀ ಊರಿಗೇ ಊಟ ಹಾಕಿಸಿದರು. ಊರಿಗೆ ಊರೇ ಸಂಭ್ರಮಿಸುತ್ತಿತ್ತು...

ಅದೇ ಸಂದರ್ಭದಲ್ಲಿ ಅದೇ ಊರಿನಲ್ಲಿ ಯಜಮಾನರ ಮನೆ ಕೆಲಸದ ಗಿರಿಜಮ್ಮನ ಮಗಳು ಲಲಿತ ತನ್ನ ಮನೆಯ ಕೋಣೆಯ ಮೂಲೆಯೊಂದರಲ್ಲಿ ಕುಳಿತು ಕಣ್ಣೀರಿಡುತ್ತಿದ್ದಳು. ಲಲಿತ ಹಾಗೂ ರಾಜಣ್ಣ ಸ್ವಲ್ಪ ಸಲುಗೆಯಿಂದಿದ್ದುದು ಎಲ್ಲರಿಗೂ ಗೊತ್ತಿತ್ತು. ಆದರೆ ಅವರ ಮಧ್ಯೆ ಪ್ರೇಮಾಂಕುರವಾದ ವಿಷಯ ಮಾತ್ರ ಯಾರಿಗೂ ಗೊತ್ತಿರಲಿಲ್ಲ. ಮುಂದೊಮ್ಮೆ ಜಮೀನ್ದಾರರ ಮನೆಯ ಸೊಸೆಯಾಗುತ್ತೇನೆ ಎಂದು ಕನಸು ಕಂಡಿದ್ದ ಲಲಿತಳಿಗೆ ರಾಜಣ್ಣನ ಮದುವೆ ಆಘಾತ ನೀಡಿತ್ತು. ಲಲಿತ ಎಂಬ ಹುಡುಗಿಯನ್ನು ಪ್ರೀತಿಸಿದ್ದೆ ಎಂಬ ನೆನಪೇ ಇಲ್ಲದಂತಿದ್ದ ರಾಜಣ್ಣನ ಸಂಸಾರ ಸುಖವಾಗಿಯೇ ಸಾಗಿತ್ತು. ಎರಡು ವರ್ಷ ಕಳೆಯುವುದರಲ್ಲಿ ಒಂದು ಗಂಡು ಮಗುವಿಗೆ ತಂದೆಯಾದ ರಾಜಣ್ಣನವರಿಗೆ ಮತ್ತೆ ಲಲಿತಳ ಮೇಲೆ ಮೋಹ ತಿರುಗಿತು. ಲಲಿತಳನ್ನು ತಾವರೆ ಹಳ್ಳದ ಮಾದೇಶ್ವರ ದೇವಸ್ಥಾನದಲ್ಲಿ ಯಾರಿಗೂ ಗೊತ್ತಾಗದ ಹಾಗೆ ಮದುವೆಯಾದರು ಮತ್ತು ತಾವರೆಹಳ್ಳದಲ್ಲಿಯೇ ಒಂದು ಮನೆ ಮಾಡಿ ಲಲಿತಳನ್ನು ಇಟ್ಟರು. ಲಲಿತ ಗರ್ಭಿಣಿಯಾದಾಗ ಅವರಿಬ್ಬರ ಸಂಬಂಧದ ವಿಷಯ ಊರೆಲ್ಲ ಹಬ್ಬಿ ರಾಜಣ್ಣನವರ ತಂದೆಯ ಕಿವಿಗೂ ಬಿತ್ತು. ತಡಮಾಡದೆ ಗಿರಿಜಮ್ಮಳನ್ನು ಕರೆದು ಆಕೆಯ ಕೈನಲ್ಲಿ ಒಂದಷ್ಟು ಹಣ ಇಟ್ಟು 'ನಮ್ಮ ಮನೆತನದ ಗೌರವ ನಿನ್ನ ಕೈಲಿದೆ. ಈಗಿಂದೀಗಲೇ ಊರುಬಿಡಬೇಕು' ಎಂದರು. ಅನ್ನದ ಋಣ, ಕೈಲಿದ್ದ ನೋಟಿನ ಕಂತೆ ಗಿರಿಜಮ್ಮಳನ್ನು ಮಗಳೊಂದಿಗೆ ಊರುಬಿಡುವಂತೆ ಮಾಡಿತು. ಮೂರು ವರ್ಷಗಳ ನಂತರ, ತಂದೆ ತೀರಿಕೊಂಡ ಮೇಲೆ ರಾಜಣ್ಣನವರಿಗೆ ಯಜಮಾನಿಕೆ ಬಂತು. ಲಲಿತಳನ್ನು ಹುಡುಕಿಸಿ ತಾಯಿ, ಮಗನನ್ನು ಊರಿಗೆ ಪುನಃ ಕರೆಸಿಕೊಂಡರು. ಅವರ ವಾಸಕ್ಕೆ ಪ್ರತ್ಯೇಕ ವ್ಯವಸ್ಥೆಯಾಯಿತಾದರೂ ಅದು ಸುಖದಾಯಕವಾಗಿರಲಿಲ್ಲ. ಗಿರಿಜಮ್ಮನ ಮಣ್ಣಿನ ಋಣ ತೀರಿದ ಬಳಿಕ ರಾಜಣ್ಣನವರ ಕುಟುಂಬದವರು ಲಲಿತ ಮತ್ತವಳ ಮಗನನ್ನು ಕೀಳಾಗಿ ನೋಡತೊಡಗಿದರು.

ಆರು ವರ್ಷಗಳಲ್ಲಿ ಮತ್ತೊಂದು ಗಂಡು ಮತ್ತು ಒಂದು ಹೆಣ್ಣು ಮಗುವಿನ ತಂದೆಯಾದ ರಾಜಣ್ಣನಿಗೆ ದಿನಗಳು ಕಳೆದಂತೆ ಲಲಿತ ಮತ್ತವಳ ಮಗನ ಬಗ್ಗೆ ತಾತ್ಸಾರ ಬೆಳೆಯುತ್ತಾ ಬಂತು. ಅವರಿಬ್ಬರ ಖರ್ಚು ವೆಚ್ಚವನ್ನೆಲ್ಲಾ ಅವರೇ ನೋಡಿಕೊಳ್ಳುತ್ತಿದ್ದರಾದರೂ ಮೊದಲಿನಂತೆ ಲಲಿತ ಮತ್ತು ಮಗನನ್ನು ಭೇಟಿಯಾಗುತ್ತಿರಲಿಲ್ಲ. ಅವರ ಕಷ್ಟ ಸುಖದಲ್ಲಿ ಭಾಗಿಯಾಗುತ್ತಿರಲಿಲ್ಲ.